# ಗೌರಿಬಾಯಿ

**ಸ್ವರ್ಣಗೌರಿ**

**ಸಂತರು ಆಧ್ಯಾತ್ಮಿಕತೆಗೆ ನವಚೇತನವನ್ನು ನೀಡುತ್ತಾರೆ. ಅವರ ಪ್ರಭಾವಲಯಕ್ಕೆ ಬಂದ ಸಾವಿರಾರು ಜನರು ಧನ್ಯರಾಗುತ್ತಾರೆ. ಅಂತಹ ಸಂತಳೊಬ್ಬಳ ಕಿರುಪರಿಚಯ ಮಾಡಿಕೊಟ್ಟಿರುವ ಕುಮಾರಿ ಸ್ವರ್ಣಗೌರಿಯವರು ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.**

ಐದಾರು ವರ್ಷದ ಪುಟ್ಟ ಬಾಲಕಿ. ವಿವಾಹವೆಂಬ ಪವಿತ್ರ ಬಂಧನಕ್ಕೆ ಸಿಲುಕಲು ಹಸೆಮಣೆಯ ಮೇಲೆ ಕುಳಿತಿದ್ದಾಳೆ. ಎರಡೂ ಕಣ್ಣುಗಳಿಗೂ ಪಟ್ಟಿಯನ್ನು ಕಟ್ಟಿದ್ದಾರೆ. ಆ ಬಾಲಕಿಗೆ ಮದುವೆಯೆಂಬ ಶಬ್ದದ ಅರ್ಥವಾದರೂ ತಿಳಿಯುವುದೇ? ಮನೆಯವರಿಗೆಲ್ಲ ಸಂಭ್ರಮವೋ ಸಂಭ್ರಮ. ಅತ್ಯಂತ ವೈಭವದಿಂದ ವಿವಾಹವು ಜರುಗಿತು. ಆನಂದ ಗದ್ದಲಗಳ ಸಂತೆಯೇನೋ ಎನ್ನುವಂತಿತ್ತು ಆ ದೃಶ್ಯ!

ಈ ಸಂಸಾರವೆಂಬ ಘೋರಾರಣ್ಯಕ್ಕೆ ಮಕ್ಕಳನ್ನು ತಳ್ಳುವುದೆಂದರೆ ಎಂತಹ ಸಂಭ್ರಮ! **ಸಂಸೋರೋಽಯಮತೀವ ವಿಚಿತ್ರ** ವಲ್ಲವೇ? ವಿವಾಹವು ಜರುಗಿದ ಒಂದು ವಾರಕ್ಕೆ ಪತಿ ಯೆನಿಸಿದವನು ಭಯಂಕರ ರೋಗಕ್ಕೆ ತುತ್ತಾಗಿ ಮರಣವನ್ನಪ್ಪಿದನು! ವಿವಾಹಕ್ಕೆ ನಾಲ್ಕೈದು ದಿನಗಳ ಹಿಂದೆಯೇ ಕಣ್ಣಿಗೆ ಯಾವುದೋ ರೋಗವು ತಗಲಿ ಆ ಪುಟ್ಟ ವಧುವಿಗೆ ಕಣ್ಣಿಗೆ ಪಟ್ಟಿ ಕಟ್ಟಿದ್ದಾರೆ. ತನ್ನ ಪತಿಯ ರೂಪವನ್ನೂ ನೋಡದ ಆ ಬಾಲಕಿಯ ವೈವಾಹಿಕ ಜೀವನವು ಅಂತ್ಯಗೊಂಡಿತು. ವಿಧಿಯ ವಿಲಾಸವೋ? ಇಲ್ಲವೇ ಆಧ್ಯಾತ್ಮಿಕ ಜೀವನದ ಭಾಗ್ಯದ ಬಾಗಿಲು ತೆರೆಯುವ ಸದವಕಾಶವೋ?

ವಾರದ ಹಿಂದೆ ಸಂಭ್ರಮಾನಂದಗಳ ತವರೂರಾದ ಆ ಮನೆಯಲ್ಲಿ ಎಲ್ಲೆಲ್ಲೂ ದುಃಖದ ಛಾಯೆ ಆವರಿಸಿತು. ಮನೆಯವರ ದುಃಖ, ಗೋಳಾಟಗಳಿಗೆ ಪಾರವಿಲ್ಲವಾಯಿತು. ಆದರೆ ಈ ಎಲ್ಲ ದುಃಖದ ಕೇಂದ್ರಬಿಂದುವಾದ ಆ ಪುಟ್ಟ ಬಾಲಕಿಯು ಮಾತ್ರ ತನ್ನ ಸರಳತೆಯಿಂದ ತನಗೆ ಕನಿಕರ ತೋರುವವರಿಗೆ, "ಆ ದೇವರೇ ನನ್ನ ಸರ್ವಸ್ವ. ನನ್ನ ಜೀವನವು ಆತನಿಗೆ ಸಮರ್ಪಿತ" ಎನ್ನುತ್ತಿದ್ದಳು!

ಗುಜರಾತಿನ ಗಿರಿಪುರ ಎಂಬ ಚಿಕ್ಕ ಗ್ರಾಮದಲ್ಲಿ ಕ್ರಿ.ಶ. ೧೭೫೯ರಲ್ಲಿ ಜನಿಸಿದ ಗೌರಿಬಾಯಿ ಬಹಳ ಬುದ್ಧಿವಂತೆ. ಆಗಿನ ಕಾಲದಲ್ಲಿ ಹೆಣ್ಣು ಮಕ್ಕಳಿಗಾಗಿ ಶಾಲೆಗಳಿಲ್ಲದಿದ್ದರೂ ಓದು ಬರಹಗಳನ್ನು ಮನೆಯಲ್ಲೇ ಕಲಿತು ಆಕೆ ಭಕ್ತಿಗೀತೆಗಳನ್ನು ರಚಿಸುತ್ತಿದ್ದಳು. ಅಷ್ಟು ಚಿಕ್ಕ ವಯಸ್ಸಿನಲ್ಲೇ ದೇವರಲ್ಲಿ ಅಚಲವಾದ ಶ್ರದ್ಧೆ, ನಂಬಿಕೆ. ಈ ಮೇಲಿನ ಘಟನೆಯಿಂದ ಮತ್ತಷ್ಟು ಅಂತರ್ಮುಖಿಯಾದಳು. ಎಲ್ಲ ವಿಧವೆಯರಂತೆ ಈ ಬಾಲ ವಿಧವೆಯು ಹದಿಮೂರು ವರ್ಷಕ್ಕೆ ಜನ ಸಂಪರ್ಕವನ್ನೆಲ್ಲ ತೊರೆದು ಸದಾ ಮನೆಗೆಲಸ, ಪೂಜೆಪುನಸ್ಕಾರಗಳಲ್ಲಿ ತನ್ನನ್ನು ತೊಡಗಿಸಿಕೊಂಡಳು. ಸದಾ ಶಾಸ್ತ್ರಪಠನ, ಕವಿತೆಗಳ ರಚನೆ, ತನ್ನದೇ ಆದ ರಾಗದಲ್ಲಿ ದೇವರಿಗಾಗಿ ಹಾಡುವುದು—ಹೀಗೆ ತನ್ನದೇ ಆದ ದಿನಚರಿಯನ್ನು ರೂಢಿಸಿಕೊಂಡಳು.

ವರ್ಷಗಳು ಉರುಳಿದವು. ಗಿರಿಪುರದ ರಾಜನಾದ ಶಿವಸಿಂಹಜಿಯು ಪಂಡಿತನೂ ಋಜುಮಾರ್ಗಿಯೂ ದೈವಭಕ್ತನೂ ಆಗಿದ್ದನು. ಗೌರಿಬಾಯಿಯ ಪವಿತ್ರತೆಯ ಮತ್ತು ದೈವಭಕ್ತಿಯ ವಿಷಯ ಸುತ್ತಲೂ ಹರಡಿ ರಾಜನ ಕಿವಿಗೂ ಬಿದ್ದಿತು. ದರ್ಶನಾರ್ಥಿಯಾಗಿ ಬಂದ ರಾಜನು ಆಕೆಯ ಅಪ್ರತಿಮ ಜ್ಞಾನ, ಪ್ರತಿಭೆಗಳಿಗೆ ಮೆಚ್ಚಿ ನೆನಪಾರ್ಥವಾಗಿ ಒಂದು ದೊಡ್ಡ ಗುಡಿಯನ್ನು ಕಟ್ಟಿಸಿಕೊಟ್ಟನು. ಗೌರಿಬಾಯಿಯು ಮನೆಮಠ ಹಾಗೂ ಸಾಂಸಾರಿಕ ಬಂಧನಗಳನ್ನೆಲ್ಲ ಕಿತ್ತೊಗೆದು ತಾನು ನಿತ್ಯವೂ ಪೂಜಿಸುತ್ತಿದ್ದ ಮೂರ್ತಿಗಳನ್ನು ತಂದು ಗುಡಿಯಲ್ಲಿ ಪ್ರತಿಷ್ಠಾಪನೆ ಮಾಡಿ ನಿತ್ಯಪೂಜೆಯಲ್ಲಿ ತೊಡಗಿದಳು. ದಿನೇ ದಿನೇ ಮಂದಿರದ ಕೀರ್ತಿಯು ಎಲ್ಲೆಡೆಯೂ ಹಬ್ಬಿತು. ಸಂತರು, ಯಾತ್ರಿಕರು, ಪಂಡಿತರು, ದೇಶದ ಮೂಲೆ ಮೂಲೆಗಳಿಂದ ಗುಂಪು ಗುಂಪಾಗಿ ಬರತೊಡಗಿದರು. ಸತ್ಸಂಗಗಳು, ಹರಿಕಥಾಶ್ರವಣಾದಿಗಳು, ಧಾರ್ಮಿಕ ಚರ್ಚೆಗಳು ವಿಜೃಂಭಣೆಯಿಂದ ನಡೆಯತೊಡಗಿದವು. ಇವೆಲ್ಲವೂ ಮೊದಲೇ ಇದ್ದ ಆಕೆಯ ಜ್ಞಾನವನ್ನು ಮತ್ತಷ್ಟು ಊರ್ಜಿತಗೊಳಿಸಿದವು. ಆಕೆಯ ಕವಿತ್ವಕ್ಕೆ ಹೊಸ ಮೆರಗನ್ನು ನೀಡಿದವು. ರಾಜ ಶಿವಸಿಂಹಜಿಯು ಒಂದು "ಸದಾವ್ರತ್" (ಉಚಿತ ಅಡುಗೆ ಮನೆ) ತೆರೆದನು. ದಿನವೂ ಸಾವಿರಾರು ಮಂದಿಗೆ ಉಚಿತ ಅನ್ನಾಹಾರಗಳ ಸಂತರ್ಪಣೆ ನಡೆಯತೊಡಗಿತು. ಸಾಕ್ಷಾತ್ ಅನ್ನಪೂರ್ಣೆಯೇ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ನರ್ತಿಸುತ್ತಿರುವಳೇನೊ ಎಂದೆನಿಸುವಂತಿತ್ತು.

ಒಮ್ಮೆ ಮಹಾಜ್ಞಾನಿಯಾದ ಸಂತನೋರ್ವನು ಈಕೆಯ ದೈವಭಕ್ತಿ ಹಾಗೂ ಆಳವಾದ ಜ್ಞಾನವನ್ನು ಕಂಡು ಮೆಚ್ಚಿ, "ನೀನು ಮೀರಾಬಾಯಿಯ ಅಂಶದಿಂದ ಜನಿಸಿರುವೆ. ಮೀರಾಬಾಯಿಯು ಅತ್ಯಂತ ದೊಡ್ಡ ದೈವಭಕ್ತೆಯಾದರೂ ಆಕೆಯಲ್ಲಿ ಜ್ಞಾನದ ಕೊರತೆಯಿತ್ತು. ಆ ಕೊರತೆಯನ್ನು ನೀಗಿಸಲೆಂದೇ ನೀನು ಹುಟ್ಟಿ ಬಂದಿರುವೆ" ಎನ್ನುತ್ತಾ ಆಕೆಗೆ ಬ್ರಹ್ಮಜ್ಞಾನ, ಆತ್ಮಜ್ಞಾನಗಳನ್ನು ಕುರಿತು ಬೋಧಿಸಿದನು. ಆಧ್ಯಾತ್ಮಿಕ ಜೀವನದಲ್ಲಿ ಸರಿಯಾದ ಮಾರ್ಗದರ್ಶನವಿತ್ತು ಒಂದು ಬಾಲ ಮುಕುಂದನ ಮೂರ್ತಿಯನ್ನು ಕಾಣಿಕೆ ನೀಡಿ ಹಿಂತಿರುಗಿದನು.

ದಿನೇ ದಿನೇ ಗೌರೀಬಾಯಿಯ ಜ್ಞಾನವು ಬಾಲಚಂದ್ರನಂತೆ ವೃದ್ಧಿಯಾಗತೊಡಗಿತು. ಅಂತೆಯೇ ವ್ಯಾವಹಾರಿಕ ಹಾಗೂ ಪ್ರಾಪಂಚಿಕ ಜಗತ್ತಿನ ವ್ಯಾಪಾರಗಳಲ್ಲಿ ವೈರಾಗ್ಯವೂ ಹೆಚ್ಚಿತು. ಬಾಹ್ಯಪ್ರಪಂಚದ ಪರಿವೆಯೇ ಇಲ್ಲದೆ ಮುಚ್ಚಿದ ಕೋಣೆಯಲ್ಲಿ ಗಾಢವಾದ ಧ್ಯಾನದಲ್ಲಿ ಮುಳುಗಿಹೋಗುತ್ತಿದ್ದಳು. ಒಮ್ಮೊಮ್ಮೆ ಹದಿನೈದು ದಿನಗಳು ಸತತವಾಗಿ ಸಮಾಧಿಸ್ಥಳಾಗುತ್ತಿದ್ದಳು. ಮುಂದೆ ಕೇವಲ ಸಾತ್ತ್ವಿಕ ಆಹಾರವಾದ ಹಾಲಿನಿಂದ ಮಾತ್ರವೇ ಉದರ ಪೋಷಣೆ ಮಾಡಿಕೊಳ್ಳುತ್ತ ಅನ್ನ ಆಹಾರಾದಿಗಳನ್ನೆಲ್ಲ ತ್ಯಜಿಸಿಬಿಟ್ಟಳು!

ಗೌರಿಬಾಯಿಯೊಡನೆ ಸದಾ ಇರುತ್ತಿದ್ದ ಹರಿಯನ್ ಎಂಬ ಮುದುಕಿಗೆ ಸಮಾಧಿಯ ವಿಷಯದಲ್ಲಿ ನಂಬಿಕೆ ಇರಲಿಲ್ಲ. ಇವೆಲ್ಲ ಒಂದು ಕಲ್ಪನೆ, ಕಟ್ಟುಕಥೆ ಎಂದೆಣಿಸಿ, ಪರೀಕ್ಷಿಸಲೋಸುಗ ಒಂದು ದಿನ ಗೌರಿಬಾಯಿಯು ಸಮಾಧಿಯಲ್ಲಿರುವಾಗ ಯಾರಿಗೂ ತಿಳಿಯದಂತೆ ಆಕೆಯ ಕೈಕಾಲುಗಳಿಗೆ ಸೂಜಿಗಳನ್ನು ಚುಚ್ಚಿದಳು. ಅದರ ಪರಿವೆಯೇ ಇಲ್ಲದ ಗೌರಿಬಾಯಿಯು ಕಿಂಚಿತ್ತೂ ಮಿಸುಕಾಡಲಿಲ್ಲ. ಗಾಬರಿಗೊಂಡ ಮುದುಕಿಯು ಓಡಿಹೋದಳು. ಸ್ನಾನ ಮಾಡಿಸುವಾಗ ಚತುರಿ ಎಂಬ ಸೋದರಿಯು ಸೂಜಿಗಳನ್ನು ನೋಡಿ ಹೌಹಾರಿ ತಪಾಸಣೆ ನಡೆಸಿದಳು. ಯಾರೂ ಮುಂದೆ ಬಂದು ತಪ್ಪನ್ನು ಒಪ್ಪಿಕೊಳ್ಳಲಿಲ್ಲ. ಕೆಲವು ತಿಂಗಳುಗಳ ನಂತರ ತನ್ನ ತಪ್ಪಿಗೆ ತಕ್ಕ ಶಾಸ್ತಿಯೋ ಎಂಬಂತೆ ಮುದುಕಿಯು ಕುಷ್ಠರೋಗಕ್ಕೆ ಬಲಿಯಾದಾಗ ಓಡಿ ಬಂದು ಗೌರಿಬಾಯಿಯ ಕಾಲಿಗೆರಗಿ ತನ್ನ ತಪ್ಪನ್ನು ಕ್ಷಮಿಸಬೇಕೆಂದು ಕಣ್ಣೀರ್ಗರೆದಳು. ದ್ವೇಷ, ಪ್ರತೀಕಾರ ಬುದ್ಧಿಗಳನ್ನೇ ಅರಿಯದ ಆ ಪವಿತ್ರ ಹೃದಯಳು, "ನೀನು ಕುಷ್ಠರೋಗದಿಂದ ಮುಕ್ತಳಾಗುವೆ, ಆದರೆ ಆ ಬಿಳಿಯ ಮಚ್ಚೆಯ ಕುರುಹುಗಳು ಮಾತ್ರ ಉಳಿಯುವುವು" ಎಂದು ಆಶ್ವಾಸನೆ ನೀಡಿದಳು.

ಗೌರಿಬಾಯಿ ಒಂದು ಸಾವಿರಕ್ಕೂ ಮಿಗಿಲಾಗಿ ಭಕ್ತಿಗೀತೆಗಳನ್ನು ರಚಿಸಿದಳು. ಭವಿಷ್ಯವನ್ನು ಕುರಿತು ಹೇಳುವ ಸಾಮರ್ಥ್ಯವನ್ನು ಪಡೆದಳು. ಜನರು ಆಕೆಯ ಕಣ್ಣುಗಳು ಹೊರಸೂಸುತ್ತಿದ್ದ ಜ್ಞಾನದ ಹೊಳಪನ್ನು ಕಂಡು ಬೆರಗಾಗುತ್ತಿದ್ದರು! ಸದಾ ಶ್ವೇತವಸ್ತ್ರವನ್ನೇ ತೊಡುತ್ತಿದ್ದ ಆಕೆಯ ಕೊರಳನ್ನು ಕೇವಲ ಒಂದು ತುಳಸಿಯ ಜಪಮಾಲೆಯು ಅಲಂಕರಿಸಿತ್ತು.

ತನ್ನ ಆರಾಧ್ಯದೈವನ ಪವಿತ್ರ ಸ್ಥಳವಾದ ವ್ರಜಭೂಮಿಯಲ್ಲಿ ಜೀವಿತದ ಕೊನೆಯ ಭಾಗವನ್ನು ಕಳೆಯಲು ನಿಶ್ಚಯಿಸಿ ಗೌರಿಬಾಯಿಯು ಸಿದ್ಧತೆ ನಡೆಸುತ್ತಿದ್ದ ವಿಷಯ ತಿಳಿದ ರಾಜನು ಆಕೆಯನ್ನು ತನ್ನ ನಾಡಿನಲ್ಲೇ ಉಳಿಸಿಕೊಳ್ಳಲು ಶತಪ್ರಯತ್ನ ಮಾಡಿದನು. ಬೆಲೆಬಾಳುವ ಕಾಣಿಕೆಗಳನ್ನು ನೀಡಿದನು. ಆದರೆ ಗೌರಿಬಾಯಿಯು ತನ್ನ ಅಚಲ ನಿರ್ಧಾರವನ್ನು ಬದಲಿಸಲೇ ಇಲ್ಲ. ಈ ಮಹಾನ್ ಸಂತಳ ಕೀರ್ತಿಯನ್ನು ಕೇಳಿದ್ದ ಜಯಪುರದ ರಾಜದಂಪತಿಗಳಿಬ್ಬರೂ ತಮ್ಮ ನಾಡನ್ನು ಹಾದುಹೋಗುತ್ತಿದ್ದ ಆಕೆಯನ್ನು ಇದಿರುಗೊಳ್ಳಲು ತಾವೇ ಖುದ್ದಾಗಿ ಬಂದರು. ಬೇಡವೆಂದರೂ ಮಹಾರಾಣಿಯು ಕೃತಜ್ಞತಾಪೂರ್ವಕವಾಗಿ ಕೊಟ್ಟ ೫೦೦ ಚಿನ್ನದ ನಾಣ್ಯಗಳ ಕಾಣಿಕೆಯನ್ನು ತನ್ನ ಸಂಗಡಿಗರ ಮುಖಾಂತರ ಬ್ರಾಹ್ಮಣರಿಗೆ ದಾನ ಮಾಡಿಸಿಬಿಟ್ಟಳು!

ಆಕೆಯ ಅಪಾರವಾದ ಜ್ಞಾನ, ಭಕ್ತಿ, ವೈರಾಗ್ಯಗಳಿಗೆ ಮೆಚ್ಚಿದ ರಾಜನು ಆಕೆಯ ದೈವಭಕ್ತಿಯನ್ನು ಪರೀಕ್ಷಿಸಲು ನಿರ್ಧರಿಸಿ ಗುಪ್ತವಾಗಿ ಅರ್ಚಕರಿಗೆ "ಗೋವಿಂದ"ನ ಪ್ರತಿಮೆಯನ್ನು ಆಭರಣಗಳಿಂದ ಅಲಂಕರಿಸಲು ಆಜ್ಞೆಯಿತ್ತನು. ಇತ್ತ ಭಾಗವತ ಶ್ರವಣದ ನೆವದಲ್ಲಿ ಗೌರಿಬಾಯಿಯನ್ನು ಗುಡಿಗೆ ಕರೆಸಿ ಮುಚ್ಚಿದ ಬಾಗಿಲಿನ ಒಳಗಿರುವ ಗೋವಿಂದನ ಪ್ರತಿಮೆಯ ಉಡಿಗೆ, ತೊಡಿಗೆ, ಅಲಂಕಾರಾದಿಗಳ ವಿವರಣೆಯನ್ನು ನೀಡಲು ಕೇಳಿಕೊಂಡನು. ರಾಜನ ಈ ಕೃತ್ಯದಿಂದ ನೊಂದ ಗೌರಿಬಾಯಿಯು ತಾನೂ ರಾಜನಂತೆ ಒಬ್ಬ ಸಾಮಾನ್ಯ ಮನುಷ್ಯಳೆಂದೂ ತನಗಾವ ಅತಿಮಾನುಷ ಶಕ್ತಿಗಳು ಇಲ್ಲವೆಂದೂ ನುಡಿದಳು. ಆದರೂ ದೇವರು ತನ್ನ ಭಕ್ತರ ಪರೀಕ್ಷಾ ಸಮಯದಲ್ಲಿ ಸಹಾಯ ಮಾಡುವನೆಂದರುಹಿ ಧ್ಯಾನಕ್ಕೆ ಕುಳಿತ ಆಕೆಯ ಮುಖಾರವಿಂದದಿಂದ ಒಂದು ಹಾಡು ಹೊರಹೊಮ್ಮಿತು. ಅದರ ಮುಖಾಂತರ ಗೋವಿಂದನ ಪ್ರತಿಮೆಗೆ ಮಾಡಿದ ಅಲಂಕಾರವನ್ನು ಕೂಲಂಕಷವಾಗಿ ವಿವರಿಸಿ "ಆದರೆ ಒಂದೇ ಒಂದು ನ್ಯೂನತೆ ಎಂದರೆ ಕಿರೀಟವಿಲ್ಲ" ಎಂದಳು. ಕಿರೀಟವಿಲ್ಲದೆ ಕೃಷ್ಣನ ಪ್ರತಿಮೆ ಇರುವುದು ಅಸಾಧ್ಯವೆಂದು ಆಶ್ಚರ್ಯಚಕಿತನಾದ ರಾಜನು ಮಂದಿರದ ಬಾಗಿಲನ್ನು ತೆರೆಸಿ ನೋಡಲು ಕಿರೀಟವು ಜಾರಿಹೋಗಿತ್ತು!! ಪಶ್ಚಾತ್ತಾಪದಿಂದ ಕ್ಷಮಾಪಣೆಯನ್ನು ಕೇಳಿದ ರಾಜನು ತನ್ನ ರಾಜ್ಯದಲ್ಲೇ ಇರಬೇಕೆಂದು ಬಹಳವಾಗಿ ಪ್ರಾರ್ಥಿಸಿದನು ಹಾಗೂ ಅರಮನೆಯನ್ನೇ ಕಾಣಿಕೆಯಾಗಿ ನೀಡಲು ಮುಂದೆ ಬಂದನು. ಆದರೆ ಹಿಂದಿನಂತೆಯೇ ತನ್ನ ಅಚಲ ನಿರ್ಧಾರವನ್ನು ಬದಲಿಸದ ಗೌರಿಬಾಯಿಯು ತಾನು ಪೂಜಿಸುತ್ತಿದ್ದ ಮೂರ್ತಿಯನ್ನು ರಾಜನಿಗೆ ನೀಡಿ ವೃಂದಾವನ ಹಾಗೂ ಗೋಕುಲಕ್ಕೆ ಹೋಗಿ ಅಲ್ಲಿ ವಾಸಿಸತೊಡಗಿದಳು. ಅನಂತರ ಸಾವಿರಾರು ವರ್ಷಗಳಿಂದ ಆಧ್ಯಾತ್ಮಿಕ ಜೀವಿಗಳ ತಪಸ್ಸಿನ ತರಂಗಗಳಿಂದ ಆವೃತವಾಗಿರುವ ಕಾಶಿಯಲ್ಲಿ ನೆಲಸಿದಳು.

ಈ ಮಹಾನ್ ಸಂತಳ ದರ್ಶನವನ್ನು ಪಡೆಯಲು ಬಂದ ಕಾಶಿಯ ಮಹಾರಾಜನಾದ ಸುಂದರಸಿಂಹನು ಆಕೆಗೆ ಎಲ್ಲ ಸುವ್ಯವಸ್ಥೆಗಳನ್ನು ಒದಗಿಸಿದನು. ಆತನಿಗೂ ಭಕ್ತಿಗೀತೆಗಳನ್ನು ರಚಿಸುವ ಹವ್ಯಾಸವಿದ್ದ ಕಾರಣ ಇಬ್ಬರೂ ಕೂಡಿ ಅನೇಕ ಗೀತೆಗಳನ್ನು ರಚಿಸಿದರು ಹಾಗೂ ಎಷ್ಟೋ ದಿನ ಧಾರ್ಮಿಕ ಚರ್ಚೆಗಳಲ್ಲಿ ಮುಳುಗಿ ಹೋಗುತ್ತಿದ್ದರು. ಆಕೆಯನ್ನು ತನ್ನ "ಗುರು"ವೆಂದು ಸ್ವೀಕರಿಸಿದ ರಾಜನು ಆಕೆಯಿಂದ ಧ್ಯಾನ ಮಾಡುವುದನ್ನೂ ಕಲಿತನು. ರಾಜನು ಕಾಣಿಕೆಯಾಗಿ ಇತ್ತ ನಗದು ಐವತ್ತು ಸಾವಿರ ರೂಪಾಯಿಗಳನ್ನು ಜಗನ್ನಾಥನ ದರ್ಶನಕ್ಕೆಂದು ಪುರಿಗೆ ಹೊರಟ್ಟಿದ್ದ ಗೌರಿಬಾಯಿಯು ಎಲ್ಲವನ್ನೂ ಪುರಿಯಲ್ಲಿಯೇ ಬಡಬಗ್ಗರಿಗೆ ದಾನವಾಗಿ ನೀಡಿದಳು.

ಯಾತ್ರೆಯಿಂದ ಹಿಂದಿರುಗಿದ ಗೌರಿಬಾಯಿಯು ಒಮ್ಮೆ ಏಳು ದಿನಗಳ ಕಾಲ ಸಮಾಧಿಸ್ಥಳಾದಳು. ದೀರ್ಘಕಾಲದ ಸಮಾಧಿಯಿಂದ ಹೊರಬಂದ ಆಕೆಯು ತನ್ನ ಅಂತ್ಯಕಾಲವು ಸಮೀಪಿಸುತ್ತಿದೆಯೆಂದು ಅರುಹಿದಳು. ಧ್ರುವಕುಮಾರನು ತಪಸ್ಸು ಮಾಡಿದ ಯಮುನೆಯ ದಡದಲ್ಲಿ ಕೊನೆಯುಸಿರು ಬಿಡಲು ಇಚ್ಛಿಸಿದಳು. ಆಕೆಯ ಕೋರಿಕೆಯನ್ನರಿತ ರಾಜನು ಎಲ್ಲ ವ್ಯವಸ್ಥೆಯನ್ನು ಮಾಡಿದನು. ಕ್ರಿ.ಶ.೧೮೬೫ರಂದು ತಾನು ಮೊದಲೇ ಆರಿಸಿಕೊಂಡ ಶ್ರೀರಾಮನ ಜನ್ಮದಿನದಂದು ಇಹಲೋಕವನ್ನು ತ್ಯಜಿಸಿ ಪರಬ್ರಹ್ಮನಲ್ಲಿ ಲೀನವಾದಳು. ಸುಗಂಧವನ್ನು ಹೊರಸೂಸುತ್ತಿದ್ದ ಸುಂದರ ಪುಷ್ಪವೊಂದು ತನ್ನ ಪಾತ್ರ ಇನ್ನು ಮುಗಿಯಿತು ಎನ್ನುವಂತೆ ಬಾಡಿಹೋಯಿತು. ಆದರೆ ಆಕೆಯು ಗುಜರಾತಿ ಭಾಷೆಯಲ್ಲಿ ರಚಿಸಿರುವ ಸಾವಿರಾರು ಗೀತೆಗಳು ಈಗಲೂ ತನ್ನ ಸುಗಂಧವನ್ನು ಬೀರುತ್ತಲೇ ಇವೆ. ಗೌರಿಬಾಯಿಯ ಜೀವನವು ಗಂಗೆಯಂತೆ ಪರಿಶುದ್ಧ, ಬಳಿಗೆ ಬಂದವರನ್ನೆಲ್ಲ ಪರಿಶುದ್ಧಗೊಳಿಸುವುದು!

ಆಧಾರ : *Women Saints of East and West)*